# Twenty five terms for Ka-Naada First Practice

## ಕ-ನಾದ ಕೀಲಿಮಣೆ ಅಭ್ಯಾಸ - ಪ್ರಾರಂಭಿಕ ಇಪ್ಪತ್ತೈದು ಪದಗಳು

-----------------------------------------

ಈ ಪದಗಳ ಪ್ರಾರಂಭಿಕ ಅಭ್ಯಾಸದಿಂದ ಕ-ನಾದ ಕೀಲಿಮಣೆಯಲ್ಲಿ ಕನ್ನಡ ಅಕ್ಷರಗಳ ಸರಣಿ- ಹಾಗೂ ಸಂಯೋಜನೆಯು ಮನಸ್ಸಿನಲ್ಲಿ ಆಂಗ್ಲ - ಸ್ಪೆಲ್ಲಿಂಗ್ - ಮಾದರಿಗಿಂತ ಭಿನ್ನವಾಗಿ ಮೂಡಿಬರುವುದನ್ನು ಗಮನಿಸಿ.

ಕನ್ನಡ ಪದಗಳನ್ನು ಕೀಲಿಸುವುದಕ್ಕೆ ಕನ್ನಡ ವರ್ಣಮಾಲೆಯ ಅಕ್ಷರಗಳ ಸರಣಿ ಮೊದಲು ಮನಸ್ಸಿನಲ್ಲಿ ಮೂಡಿಬರಬೇಕು; ಹಾಗೂ ಮನಸ್ಸಿನಲ್ಲಿ ಮೂಡಿದ ಕನ್ನಡ ವರ್ಣಮಾಲೆಯ ವರ್ಣ-ಅಕ್ಷರಗಳು ಬೆರಳುಗಳ ಚಾಲನೆಯಲ್ಲಿ ಬರಬೇಕು.

ಇವೆರಡೂ ಹಂತಗಳ ನಡುವೆ ಪ್ರಸ್ತುತ QWERTY ಆಧಾರಿತ ತಂತ್ರಾಂಶಗಳಲ್ಲಿ ಅನವಶ್ಯಕವಾದ ಇನ್ನೊಂದು ಹಂತ ಸೇರಿಕೊಂಡಿದೆ. ಇದು: ಕನ್ನಡ ವರ್ಣಾಕ್ಷರಗಳನ್ನು ಆಂಗ್ಲ ವರ್ಣಮಾಲೆಗೆ ಹೊಂದಾಣಿಕೆ ಮಾಡುವುದು. ಎಂದರೆ: ಕನ್ನಡ 'ಕ' ಕೀಲಿಸಲು ಇಂಗ್ಲೀಷಿನ 'k' ಕೀಲಿ (ಅಥವಾ ಬೇರೆ ಕೃತಕ ನಿರ್ದೇಶಿತ ಕೀಲಿಯನ್ನು = English character proximate or artificial-phonetic mapped key location effort) ಗುರುತಿಸಿ ಟಂಕಿಸಬೇಕಾಗುತ್ತದೆ.

ಕ-ನಾದ ಕೀಲಿಮಣೆಯಲ್ಲಿ ಈ ಹಂತ ಇರುವುದಿಲ್ಲ. ಇದರಿಂದ ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಕನ್ನಡದಲ್ಲಿಯೇ ಮನಸ್ಸಿನಲ್ಲಿ ಮೂಡಿಸಿಕೊಂಡು ಅದಕ್ಕೆ ಅನುಗುಣವಾಗಿ ಬೆರಳು ಚಾಲನೆ ಮಾಡುವುದು ಸುಲಭ -ಸರಳ- ಸಹಜವಾಗುತ್ತದೆ.

<u>ಸೂಚನೆ</u>:

ಈ ಕೆಳಕಂಡ ಪದಗಳನ್ನು ಕ-ನಾದ ಕೀಲಿಮಣೆಯಲ್ಲಿ ಟಂಕಿಸಿ.

ಒಂದು ಸಾಲಿನಲ್ಲಿ ಮೂರು ಪದಗಳು ಇರುತ್ತದೆ. ಪದಗಳಲ್ಲಿ ಒಂದು ರೀತಿಯ ವರ್ಣ ಸಮಾನತೆ, ಪ್ರಾಸ ಇದ್ದರೂ, ಪ್ರತಿಪದವೂ ಕೀಲಿಸುವಾಗ ಭಿನ್ನವಾಗಿರುತ್ತದೆ. ಪ್ರತಿಪದವೂ ಭಿನ್ನ ಅರ್ಥವನ್ನು ಹೊಂದಿರುತ್ತದೆ. ಇಂಗ್ಲೀಷ್ ಸ್ಪೆಲ್ಲಿಂಗ್ ನಲ್ಲಿ ಇವೇ ಪದಗಳನ್ನು ಕೀಲಿಸಿದಾಗ, ಅವನ್ನು ಕನ್ನಡ ಅರ್ಥಮೂಡುವಂತೆ ಉಚ್ಚಾರಣೆ ಮಾಡಲು ಸ್ವಲ್ಪ ಕಷ್ಟ- ಸಂಶಯಗಳು ಉಂಟಾಗುತ್ತವೆ. ಆದರೆ ಕನ್ನಡ ಲಿಪಿಯಲ್ಲಿ ಅಕ್ಷರಗಳನ್ನು ಕೀಲಿಸಿದಾಗ ಯಾವುದೇ ಸಂಶಯ- ಸಂದೇಹ ಇಲ್ಲದೆ ಬಯಸಿದ ಪದವನ್ನು ಶುದ್ಧವಾಗಿ ಗಣಕದಲ್ಲಿ ನಿವೇಶಿಸಲು ಸುಲಭ-ಸಾಧ್ಯವಾಗುತ್ತದೆ.

<u>ಅಂತಿಮ ಪರೀಕ್ಷೆ</u>:

ನಿಮ್ಮ ಹೆಸರು, ನಿಮ್ಮ ಹುದ್ದೆಯ ಹೆಸರು, ನೀವು ಕೆಲಸಮಾಡುತ್ತಿರುವ ಕಛೇರಿಯ ಹೆಸರನ್ನು ಕ-ನಾದ ಕೀಲಿಮಣೆ ಬಳಸಿ ಟಂಕಿಸಿ.

| | | |
|---|---|---|
| 1. ನಾನು | ನೀನು | ಅವನು |
| 2.ನಾಯಿ | ಕಾಯಿ | ತಾಯಿ |
| 3.ಅಮ್ಮ | ತಮ್ಮ | ಗುಮ್ಮ |
| 4.ಮೈಸೂರು | ಮಂಡ್ಯ | ಹುಬ್ಬಳ್ಳಿ |
| 5. ಪಂಪ | ತಂಪು | ಕುವೆಂಪು |
| 6. ಪ್ರಜಾವಾಣಿ | ಪ್ರಜಾಮತ | ಪ್ರಜಾಪ್ರಭುತ್ವ |
| 7. ಚಂದ್ರ | ಇಂದ್ರ | ಉಪೇಂದ್ರ |
| 8. ಸರಕಾರ | ಸರದಾರ | ತರಕಾರಿ |
| 9. ಭಾರತ | ಭಾರತಿ | ಭರ್ಜರಿ |
| 10.ಭಾನುವಾರ | ಸೋಮವಾರ | ಶುಕ್ರವಾರ |
| 11.ಮಂಗ | ಮಂಗಲ | ಮಂಗಳ |
| 12.ಕಳ್ಳಿ | ಬಳ್ಳಿ | ಮಳ್ಳಿ |
| 13. ಪತ್ರಿಕೆ | ಪುತ್ರಿಕೆ | ಭಸ್ತ್ರಿಕೆ |
| 14. ವೃತ್ತ | ಆವೃತ್ತ | ಆವೃತ್ತಿ |
| 15. ಇಡ್ಲಿ | ವಡೆ | ಸಾಂಬಾರ್ |
| 16. ಕಾಫಿ | ಟಾಫಿ | ಟ್ರೋಫಿ |
| 17.ಸುಧಾ | ವಸುಧಾ | ಸುರಂಗ |
| 18. ಗಣೇಶ | ಗುಣೇಶ | ಹನುಮೇಶ |
| 19.ನೋಡು | ಕೋಡು | ಜೋಡು |
| 20. ಯವನ | ಯೌವನ | ಚ್ಯವನ |
| 21. ಕುದುರೆ | ಚದುರೆ | ಮಧುರೆ |
| 22. ಅಣ್ಣಯ್ಯ | ಶಿವಣ್ಣ | ಸಣ್ಣಯ್ಯ |
| 23. ಬಸವಣ್ಣ | ರಂಗಣ್ಣ | ಸಿಂಗಣ್ಣ |
| 24. ವಿಧಾನ | ನಿಧಾನ | ಸಮಾಧಾನ |
| 25. ಬೆಂಗಳೂರು | ಬೆಂದಕಾಳೂರು | ಬ್ಯಾಂಗಳೂರ್ |